## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 183 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆ ಸಂಪೂರ್ಣ ಸ್ಥಗಿತ ಗೊಂಡಿರುವುದರಿಂದ, ಜಿಲ್ಲೆಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳು ನಿಂತು ಹೋಗಿ ತೀವ್ರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿರುವುದಿಲ್ಲ. ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆಗಾಗಿ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.<br>➢ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಗೆ 108 ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುತ್ತವೆ.<br>➢ ಸದರಿ ಕಲ್ಲುಗಣಿ ಗುತ್ತಿಗೆಗಳ ಪರಿಸರ ಅನುಮತಿ ಪತ್ರದಲ್ಲಿನ ವಾರ್ಷಿಕ ಉಪಖನಿಜ ಉತ್ಪಾದನೆ ಪ್ರಮಾಣವು 56,45,659 ಮೆಟ್ರಿಕ್ ಟನ್ ಗಳಾಗಿರುತ್ತದೆ.<br>➢ ಸದರಿ ಕಟ್ಟಡ ಕಲ್ಲುಗಣಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 17,19,915 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ 3,93,928 ಮೆಟ್ರಿಕ ಟನ್ ಕಟ್ಟಡ ಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 32 ರಡಿ ಖಾಸಗಿ / ಪಟ್ಟಾ ಜಮೀನುಗಳಲ್ಲಿ ಕೆಂಪು ಕಲ್ಲುಗಣಿಗಾರಿಕೆಗೆ (ಲ್ಯಾಟರೈಟ್ 'ಎ' ಗ್ರೇಡ್ ಅಥವಾ ಕೈಗಾರಿಕಾ ಉದ್ದೇಶ) 19 ಗಣಿ ಗುತ್ತಿಗೆ ಲೈಸನ್ಸ್‌ಗಳನ್ನು ಮಂಜೂರು ಮಾಡಿ, ಚಾಲ್ತಿಯಲ್ಲಿದ್ದು, ಸದರಿ ಗುತ್ತಿಗೆಗಳಿಂದ 2024-25ನೇ ಸಾಲಿನಲ್ಲಿ 1,14,539 ಮೆಟ್ರಿಕ್ ಟನ್ ಮತ್ತು 2025-26ನೇ ಸಾಲಿನಲ್ಲಿ 5,11,912 ಮೆಟ್ರಿಕ್ ಟನ್ ಕೆಂಪು ಕಲ್ಲನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು- 3-A(a) ಮತ್ತು 3-A(b) ರಡಿ ಹಲವು ಉದ್ದೇಶಗಳಿಗೆ ಅನುಮತಿ ನೀಡಲು ಅವಕಾಶವಿರುತ್ತದೆ. ಅದರಂತೆ ಪಟ್ಟಾ/ ಖಾಸಗಿ ಜಮೀನುಗಳನ್ನು ಕೃಷಿಯೋಗ್ಯ ಜಮೀನುಗಳನ್ನಾಗಿ (ಸಮತಟ್ಟು) ಪರಿವರ್ತಿಸಿ- |
| ಆ) | ಬಂದಿದ್ದಲ್ಲಿ, ಕಟ್ಟಡ ನಿರ್ಮಾಣ ಕ್ಷೇತ್ರಕ್ಕೆ ಅತ್ಯವಶ್ಯವಾಗಿ ಬೇಕಾಗಿರುವ ಕೆಂಪು ಕಲ್ಲು, ಜಲ್ಲಿ, ಮರಳು ಬೇಡಿಕೆಗನುಗುಣವಾಗಿ ಪೂರೈಕೆಯಾಗದೆ ಜಿಲ್ಲೆಯಲ್ಲಿ ಇಡೀ ಕಟ್ಟಡ ನಿರ್ಮಾಣ ಕ್ಷೇತ್ರ ತೀವ್ರ ತೊಂದರೆಗೆ ಸಿಲುಕಿರುವುದನ್ನು ಪರಿಹರಿಸಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; | |

| | | |
|---|---|---|
| | | -ಕೊಳ್ಳಲು ಅನುಮತಿ ನೀಡಲಾಗುತ್ತಿದ್ದು, ಅದರಂತೆ ಜಮೀನುಗಳನ್ನು ಪರಿವರ್ತಿಸಿಕೊಳ್ಳುವ ಸಂದರ್ಭದಲ್ಲಿ ಕೆಂಪು ಕಲ್ಲುಗಳ (ಲ್ಯಾಟರೈಟ್) ಲಭ್ಯವಾದಲ್ಲಿ ಸದರಿ ಕೆಂಪು ಕಲ್ಲನ್ನು ನಿಗದಿಪಡಿಸಿದ ರಾಜಧನವನ್ನು ಪಾವತಿಸಿ ವಿಲೇವಾರಿ ಮಾಡಲು ಅವಕಾಶವಿರುತ್ತದೆ. ಅದರಂತೆ, 2024-25ನೇ ಸಾಲಿನಲ್ಲಿ ಅನುಮತಿ ನೀಡಿದ್ದ 25 ಕಾರ್ಯಾದೇಶಗಳ ಪ್ರದೇಶದಲ್ಲಿ 9659 ಮೆಟ್ರಿಕ್ ಟನ್ ಹಾಗೂ 2025-26ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ 11 ಕಾರ್ಯಾದೇಶ ಪ್ರದೇಶಗಳಲ್ಲಿ 9975 ಮೆಟ್ರಿಕ್ ಟನ್ ಗಳಷ್ಟು ಲಭ್ಯವಾದ ಕೆಂಪು ಕಲ್ಲುಗಳ ಸಾಗಾಣಿಕೆಗೆ ಪರವಾನಿಗೆಗಳನ್ನು ನೀಡಲಾಗಿರುತ್ತದೆ.<br>➢ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ನಿಯಂತ್ರನ ಹೊರತುಪಡಿಸಿದ ವಲಯದ (Non- CRZ) ವ್ಯಾಪ್ತಿಯಲ್ಲಿ 27 ಮರಳು ಗಣಿ ಗುತ್ತಿಗೆಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿದ್ದು, 05 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುತ್ತದೆ.<br>➢ ಸದರಿ 32 ಮರಳು ಬ್ಲಾಕ್‌ಗಳಿಂದ 7,19,936 ಮೆಟ್ರಿಕ್ ಟನ್ ಮರಳು ಗಣಿಗಾರಿಕೆಗೆ ಲಭ್ಯವಿದ್ದು, 2024-25ನೇ ಸಾಲಿನಲ್ಲಿ 74,846 ಮೆಟ್ರಿಕ್ ಟನ್ ಮರಳನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ 2025-26ನೇ ಸಾಲಿನಲ್ಲಿ ಪ್ರಸ್ತುತ 16 ಟೆಂಡರ್ ಕಂ ಹರಾಜು ಮೂಲಕ ಮಂಜೂರು ಮಾಡಿರುವ ಮತ್ತು 03 ಸರ್ಕಾರಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿರುವ ಮರಳು ಗಣಿ ಗುತ್ತಿಗೆಗಳ ಚಾಲ್ತಿಯಲ್ಲಿದ್ದು, ಸದರಿ ಮರಳು ಗಣಿ ಗುತ್ತಿಗೆಗಳಿಂದ 4,07,697 ಮೆಟ್ರಿಕ್ ಟನ್ ಪ್ರಮಾಣದ ಮರಳು ಗಣಿಗಾರಿಕೆಗೆ ಲಭ್ಯವಿದ್ದು, 34,805 ಮೆಟ್ರಿಕ್ ಟನ್ ಮರಳನ್ನು ಉತ್ಪಾದಿಸಿ ಸಾಗಾಣಿಕೆ ಮಾಡಲಾಗಿರುತ್ತದೆ.<br>➢ ಜಿಲ್ಲೆಯಲ್ಲಿ 16 ಎಂ-ಸ್ಯಾಂಡ್ ಉತ್ಪಾದನೆ ಸ್ಟೋನ್ ಕ್ರಷರ್ ಘಟಕಗಳಿದ್ದು, ಸದರಿ ಘಟಕಗಳಿಂದ 2024-25 ನೇ ಸಾಲಿನಲ್ಲಿ 1,16,741 ಮೆಟ್ರಿಕ್ ಟನ್ ಹಾಗೂ 2025-26ನೇ ಸಾಲಿನ ಜುಲೈ ಅಂತ್ಯದವರೆಗೆ 1,34,706 ಮೆಟ್ರಿಕ್ ಟನ್ ಪ್ರಮಾಣದ ಎಂ-ಸ್ಯಾಂಡ್ ನ್ನು ಉತ್ಪಾದನೆ ಮಾಡಿ ಸರಬರಾಜು ಮಾಡಲಾಗಿರುತ್ತದೆ.<br>➢ ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶದಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸುವ ಸಂಬಂಧ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ದಿನಾಂಕ 08.05.2023 ರಂದು ಕರಡು ಮಾರ್ಗಸೂಚಿಗಳನ್ನು ಹೊರಡಿಸಿದೆ. ಸದರಿ ಕರಡು ಮಾರ್ಗಸೂಚಿಗಳಿಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು - |

| | | |
|---|---|---|
| | | ಭಾರತ ಸರ್ಕಾರದಿಂದ ಅಂತಿಮಗೊಳಿಸಿ, ಅಧಿಸೂಚನೆ ಜಾರಿಯಾದ ನಂತರ ಜಿಲ್ಲಾ 07 ಸದಸ್ಯರ ಸಮಿತಿಯು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸುತ್ತದೆ. |
| ಇ) | ಯಾವ ಕಾಲಮಿತಿ ಯೊಳಗೆ ಜಿಲ್ಲೆಯಲ್ಲಿ ಕೆಂಪು ಕಲ್ಲು, ಜಲ್ಲಿ, ಮರಳು ಪೂರೈಕೆಯಲ್ಲಿ ಪ್ರಸ್ತುತ ಉಂಟಾಗಿರುವ ವ್ಯತ್ಯಯವನ್ನು ಹೋಗಲಾಡಿಸಿ, ಬೇಡಿಕೆಗ ನುಗುಣವಾಗಿ ಪೂರೈಕೆಗೆ - ಸೂಕ್ತ ಕ್ರಮ ವಹಿಸುವುದರ ಮೂಲಕ ಪ್ರಸ್ತುತ ಇಡೀ ಜಿಲ್ಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿರುವ ನಿರ್ಮಾಣ ಕ್ಷೇತ್ರ ಹಾಗೂ ಕಾರ್ಮಿಕ ವರ್ಗಕ್ಕೆ ಪರಿಹಾರ ಒದಗಿಸಲಾಗುವುದು? | ➢ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಲ್ಲಿ, ಮರಳು ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯವನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.<br>➢ ಮುಂದುವರೆದು, ಕೆಂಪು ಕಲ್ಲು (ಲ್ಯಾಟರೈಟ್) ಖನಿಜವು $Al_2O_3$ ಖನಿಜಾಂಶದ ತಾಂತ್ರಿಕ ಅಂಶಗಳ ಆಧಾರದ ಮೇಲೆ ಮುಖ್ಯ ಖನಿಜ ಮತ್ತು ಉಪಖನಿಜಗಳಾಗಿ ವರ್ಗೀಕೃತಗೊಳ್ಳುತ್ತದೆ.<br>➢ ಕೆ.ಎಂ.ಎಂ.ಸಿ.ಆರ್ ನಿಯಮಗಳು ಉಪಖನಿಜಗಳ ಗಣಿ ಗುತ್ತಿಗೆ/ ಲೈಸನ್ಸ್ ಕಾರ್ಯದೇಶ ನೀಡಲು ಮಾತ್ರ ಅವಕಾಶವಿರುತ್ತದೆ. ನಿಯಮ 3A(a), 3A(b) ಮತ್ತು 32 ರಡಿಯಲ್ಲಿನ ಅವಕಾಶದಂತೆ ಉಪಖನಿಜ ವ್ಯಾಪ್ತಿಗೆ ಒಳಪಡುವ ಕೆಂಪು ಕಲ್ಲು (ಲ್ಯಾಟರೈಟ್) ಉಪಖನಿಜಗಳನ್ನು ಖಾಸಗಿ/ ಪಟ್ಟಾ ಜಮೀನುಗಳಲ್ಲಿ ತೆರವುಗೊಳಿಸಲು ಕಾರ್ಯನುಮತಿ/ ಲೈಸನ್ಸ್ ನೀಡಿ ಕೆಂಪು ಕಲ್ಲುಗಳ ಬೇಡಿಕೆಯನ್ನು ಪೂರೈಸಲು ಕ್ರಮವಹಿಸಲಾಗಿದೆ. |

ಸಂಖ್ಯೆ ಸಿಐ-ಎಂಎಂಎನ್/198/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.